# ಗುವಾಹಟಿ ಟು ಚಿರಾಪುಂಜಿ ಮರೆಯಲಾಗದ ಪ್ರಯಾಣ

■ ವೀಣಾ ರಾವ್

ಇತ್ತೀಚೆಗೆ ಸ್ನೇಹಿತರ ಮದುವೆಗೆ ಅಸ್ಸಾಮಿಗೆ ಹೋಗುವ ಸಂದರ್ಭ ಬಂತು. ಅಲ್ಲಿಯವರೆಗೆ ಹೋಗಿ ಬರೀ ಮದುವೆ ಮುಗಿಸಿ ಬರಲಾದೀತೆ? ಗುವಾಹಟಿಯ ಸುತ್ತಮುತ್ತಲೂ ಒಂದಿಷ್ಟು ಜಾಗಗಳಿಗೆ ಭೇಟಿಕೊಟ್ಟು ಬರುವುದು ಎಂದು ಪ್ಲ್ಯಾನ್ ಮಾಡಿದೆವು.

ಅಸ್ಸಾಂನ ರಾಜಧಾನಿ ದಿಸ್ಪುರ್ ಆದರೂ ಗುವಾಹಟಿಗೇ ಹೆಚ್ಚು ಪ್ರಾತಿನಿಧ್ಯ. ಈಗ ದಿಸ್ಪುರ್ ಗುವಾಹಟಿಯ ಒಂದು ಭಾಗವಾಗಿ ಸೇರಿಹೋಗಿದೆ. ಸುತ್ತಲೂ ಬೆಟ್ಟ ಗುಡ್ಡ ಹಸಿರಿನ ನಡುವೆ ಇರುವ ಚೆಲುವಾದ ಊರು. ಅದಕ್ಕೆ ಕುಂದಣವಿಟ್ಟ ಹಾಗೆ ಜುಳು ಜುಳು ಹರಿಯುವ ಬ್ರಹ್ಮಪುತ್ರಾ ನದಿ. ಬ್ರಹ್ಮಪುತ್ರಾ ಎಂದರೆ ಬ್ರಹ್ಮನ ಮಗ ಶಿವ. ನದಿಗಳೆಲ್ಲವನ್ನೂ ಹೆಣ್ಣಿಗೆ ಹೋಲಿಸಿದರೂ ಬ್ರಹ್ಮಪುತ್ರಾ ಮಾತ್ರ ಗಂಡುನದಿ. ನದಿಯ ಮಧ್ಯೆ ನಡುಗಡ್ಡೆಯಲ್ಲಿ ಉಮಾನಂದ ದೇವಾಲಯವಿದೆ.

ನದೀತಟದಿಂದ ಅಲ್ಲಿಗೆ ಹೋಗಲು ಫೆರ್ರಿಯಲ್ಲಿ ಕಾಲು ಗಂಟೆ ಪ್ರಯಾಣ. ಸರ್ಕಾರಿ ಬೋಟ್‌ಗಳೇ ಇವೆ. ₹20 ಶುಲ್ಕ. ದೇವಾಲಯದ ಬಳಿ ಇಳಿದು 108 ಮೆಟ್ಟಿಲು ಹತ್ತಬೇಕು. ಅಲ್ಲಿ ಸಂಜೆ ನಾಲ್ಕಕ್ಕೇ ಸೂರ್ಯ ಮುಳುಗುವುದರಿಂದ ಬೇಗನೇ ಹೋಗಬೇಕು. ಸುತ್ತಲೂ ಹಸಿರಿನ ಚೇತೋಹಾರಿ ವಾತಾವರಣ, ಗದಗುಟ್ಟಿಸುವ ಚಳಿಯಲ್ಲಿ ಬೆಟ್ಟದ ಮೆಟ್ಟಿಲೇರುವುದು ಸೊಗಸಾದ ಅನುಭವ. ಬೆಟ್ಟ ಹತ್ತಿ ದೇವಾಲಯ ಪ್ರವೇಶಿಸಿದ ನಂತರ 10 12 ಮೆಟ್ಟಿಲು ಕೆಳಗೆ ಇಳಿದು ಗುಹೆಯಲ್ಲಿರುವ ಉಮಾನಂದನ ದರುಶನ ಪಡೆಯಬೇಕು. ನಾವು ಹೋದ ಸಮಯ ತೀರ್ಥಸ್ನಾನದ ಅವಧಿ; ಹತ್ತಿರದ ರಾಜ್ಯಗಳಿಂದ ಬಂದ ಜನರಿಂದ ಗುವಾಹಟಿ ತುಂಬಿಹೋಗಿತ್ತು. ರಷ್‌ನಲ್ಲೇ ದರ್ಶನ ಮಾಡಿ ನಂತರ ಬೆಟ್ಟ ಇಳಿದು ಮತ್ತೊಂದು ಫೆರ್ರಿಯಲ್ಲಿ ದಡ ತಲುಪಿಕೊಂಡೆವು.

ಇಲ್ಲಿನ ಕಾಮಾಕ್ಯ ದೇವಾಲಯ ಬಹಳ ಪ್ರಸಿದ್ಧಿ. 51 ಶಕ್ತಿಪೀಠಗಳಲ್ಲಿ ಇದೂ ಒಂದೆಂದು ಹೇಳುತ್ತಾರೆ. ಬಹಳ ಪುರಾತನ ದೇವಾಲಯ. ತಾಂತ್ರಿಕ ಸಾಧಕರಿಗೆ ಈ ದೇವಾಲಯ ಪವಿತ್ರವಾದದ್ದು. ನಾಗರ ಶೈಲಿ ಹಾಗೂ ಮಾಳವ ಶೈಲಿಯಲ್ಲಿ ದೇವಾಲಯವನ್ನು ನಿರ್ಮಿಸಲಾಗಿದೆ. ಇಲ್ಲಿ ದೇವಿಯ ಮೂರ್ತಿ ಯೋನಿ ರೂಪದಲ್ಲಿದೆ. ಹಾಗೆ ನಿರ್ಮಿಸಲು ಇಲ್ಲಿನ ರಾಜನಿಗೆ ದೇವಿ ಕನಸಿನಲ್ಲಿ ಕಾಣಿಸಿ ಹೇಳಿದ್ದಳಂತೆ. ಕನಸಿನಲ್ಲಿ ಹೇಗೆ ಕಂಡಿತೋ ಅದನ್ನು ರಾಜ, ಮೂರ್ತಿ ನಿರ್ಮಿಸುವವರಿಗೆ ಹೇಳಿ ಅದೇ ರೀತಿ ರೂಪಿಸಿದ್ದಾರೆ. ಬಂಗಾರದಲ್ಲಿ ನಿರ್ಮಿಸಿದ ಮೂರ್ತಿ.

ಇಲ್ಲಿ ದೇವಿ ವರ್ಷಕ್ಕೊಂದು ಬಾರಿ ಮುಟ್ಟಾಗುತ್ತಾಳಂತೆ, ಪ್ರತಿ ವರ್ಷದ ಜೂನ್ ತಿಂಗಳಲ್ಲಿ. ಮಹಿಳೆಯರು ತಿಂಗಳಿಗೊಮ್ಮೆ ಮುಟ್ಟಾದರೆ ದೇವಿ ವರ್ಷಕ್ಕೊಮ್ಮೆ ಆಗುತ್ತಾಳೆ. ನಾವು ಸ್ರಾವವನ್ನು ತಡೆಯಲು ವಸ್ತ್ರ ಉಪಯೋಗಿಸುವ



